ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ: ಕವಿಪ್ರನಿನಿ/ಬಿ57/23079/2021-22 ದಿನಾಂಕ : 02 SEP 2021

## ಸುತ್ತೋಲೆ

ವಿಷಯ: ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್)ಕ್ಕೆ ಸಹಾಯಕ ಅಭಿಯಂತರರು(ಸಿವಿಲ್) ರವರುಗಳ ನಿಯೋಜನೆ ಬಗ್ಗೆ.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಎಸ್‌ಎ3/1598/2006-07 ದಿನಾಂಕ 05.04.2014
2. ಸರ್ಕಾರದ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ ರವರ ಅ.ಸ.ಪತ್ರ ಸಂಖ್ಯೆ: ಟಿ.ಒ.ಆರ್ 110 ಟಿ.ಡಿ.ಬಿ 2021 ದಿನಾಂಕ 17.06.2021
3. ನಿಗಮದ ಸಮ ಸಂಖ್ಯೆ ಸುತ್ತೋಲೆ ದಿನಾಂಕ 23.06.2021.

--

ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ 13ನೇ ಬೋರ್ಡ್ ಸಭೆಯಲ್ಲಿ, ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ ರವರ ಅಧ್ಯಕ್ಷತೆಯಲ್ಲಿರುವ ಸಮಿತಿಯು 03 ಸಹಾಯಕ ಅಭಿಯಂತರರು(ಸಿವಿಲ್) ಹುದ್ದೆಗಳಿಗೆ ಸರ್ಕಾರಿ ಸ್ವಾಮ್ಯದ ಕೆಪಿಸಿಎಲ್, ಕೆಪಿಟಿಸಿಎಲ್ ಮತ್ತು ಎಂಪಿಎಂ ಗಳಲ್ಲಿ ಕನಿಷ್ಟ 5 ವರ್ಷಗಳ ಕ್ಷೇತ್ರಕಾರ್ಯದಲ್ಲಿ(ಫೀಲ್ಡ್) ಅನುಭವವಿರುವ ಹಾಗೂ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್) ನಲ್ಲಿ ನಿಯೋಜನೆ ಮೇಲೆ ರಾಜ್ಯಾದ್ಯಂತ ಕೆಲಸ ಮಾಡಲು ಆಸಕ್ತಿ ಹೊಂದಿರುವ ಸಹಾಯಕ ಅಭಿಯಂತರರು(ಸಿವಿಲ್) ಅಭ್ಯರ್ಥಿಗಳ ಸಂದರ್ಶನ ನಡೆಸಿ ಸೂಕ್ತ ಅಭ್ಯರ್ಥಿಗಳನ್ನು 3 ವರ್ಷಗಳ ಅವಧಿಗೆ ಎರವಲು ಸೇವೆ ಮೇಲೆ ಪಡೆಯಲು ತೀರ್ಮಾನಿಸಲಾಗಿರುವುದಾಗಿ ಉಲ್ಲೇಖ-2 ರ ಪತ್ರದಲ್ಲಿ ತಿಳಿಸಿದ್ದು, ಆಸಕ್ತ ಸಹಾಯಕ ಅಭಿಯಂತರರು(ಸಿವಿಲ್) ರವರ ರೆಸ್ಯೂಮ್‌ಗಳನ್ನು 15 ದಿನಗಳ ಒಳಗಾಗಿ ಕಳುಹಿಸಿಕೊಡುವಂತೆ ಕೋರಿರುತ್ತಾರೆ.

ಆದ್ದರಿಂದ, ಉಲ್ಲೇಖ-1 ರ ನಿಗಮದ ನಿಯೋಜನಾ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟು ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರುವ ಅಧಿಕಾರಿಗಳು ಈ ಸುತ್ತೋಲೆಯ ದಿನಾಂಕದಿಂದ ಏಳು ದಿನಗಳ ಒಳಗಾಗಿ ತಮ್ಮ ಇಚ್ಛಿತಾ ಪತ್ರವನ್ನು ಹಾಗೂ ರೆಸ್ಯೂಮ್‌ಗಳನ್ನು ಸಮುಚಿತ ಮಾರ್ಗದ ಮುಖೇನ ಕವಿಪ್ರನಿನಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

| |
|---|
| ವ್ಯವಸ್ಥಾಪಕ ನಿರ್ದೇಶಕರು ಅವರಿಂದ ಅನುಮೋದಿಸಲ್ಪಟ್ಟಿದೆ. |

ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿಗಳು:
1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ವಿದ್ಯುತ್ ಸರಬರಾಜು ಕಂಪನಿಗಳು/ಪಿಸಿಕೆಎಲ್
2. ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುತ್), ಕವಿಪ್ರನಿನಿ/ ವಿದ್ಯುತ್ ಸರಬರಾಜು ಕಂಪನಿಗಳು
3. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿದ್ಯುತ್), ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು

4. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ಕವಿಪ್ರನಿನಿ/ವಿದ್ಯುತ್ ಸರಬರಾಜು ಕಂಪನಿಗಳು
5. ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ kptcl.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.